# ಜಿಲ್ಲಾ ನಗರಾಭಿವೃದ್ಧಿ ಕೋಶ, ಉತ್ತರ ಕನ್ನಡ, ಕಾರವಾರ – 581 301

DISTRICT URBAN DEVELPOMENT CELL, D.C. OFFICE UTTARA KANNADA DISTRICT, KARWAR-581 301

ದೂರವಾಣಿ : / Telephone: 08382 221170
08382 221170 (Fax)
Email: itstaffdudckarwar@gmail.com

ನಂ. ಡಿಯುಡಿಸಿ /ವಿವ/ಕರಾವಳಿ ಉತ್ಸವ/2017-18 ದಿನಾಂಕ: 14-11-2017

## ಅಲ್ಪಾವಧಿ ಟೆಂಡರ್ ಪ್ರಕಟಣೆ

**ಯಾವತ್ತೂ ಸಾಂಸ್ಕೃತಿಕ ಕಾರ್ಯಕ್ರಮ ಹಾಗೂ ಇತ್ಯಾದಿ ದೊಡ್ಡಮಟ್ಟದ ಕಾರ್ಯಕ್ರಮಗಳ ವೇದಿಕೆಯಲ್ಲಿ ಶಾಮಿಯಾನ್ ಹಾಗೂ ಖುರ್ಚಿಗಳನ್ನು ಅಳವಡಿಸಿ ವೇದಿಕೆ ತಯಾರಿಸಿ ಕೊಡುವವರಿಗೆ ಈ ಮೂಲಕ ತಿಳಿಯಪಡಿಸುವುದೇನೆಂದರೆ,**

ಉತ್ತರ ಕನ್ನಡ ಜಿಲ್ಲೆಯ ಕರಾವಳಿ ಉತ್ಸವ – 2017 ದಿನಾಂಕ: 08, 09, 10 ನೇ ಡಿಸೆಂಬರ್ 2017 ರಂದು ರವೀಂದ್ರನಾಥ ಕಡಲ ತೀರದಲ್ಲಿ ಇರುವ ಮಯೂರವರ್ಮ ವೇದಿಕೆಯಲ್ಲಿ ಆಚರಣೆ ಮಾಡಲು ನಿರ್ಧರಿಸಲಾಗಿದೆ. ಈ ಸಂಬಂಧ ವೇದಿಕೆ ಕಾರ್ಯಕ್ರಮ ಹಾಗೂ ಸ್ಥಳೀಯ, ರಾಷ್ಟ್ರೀಯ ಮತ್ತು ಬಾಲಿವುಡ್ ತಾರೆಗಳು ಸಾಂಸ್ಕೃತಿಕ ಕಾರ್ಯಕ್ರಮಕ್ಕೆ ಆಗಮಿಸುವರಿದ್ದು ಸದರ ವೇದಿಕೆ ಕಾರ್ಯಕ್ರಮಕ್ಕೆ ಹಾಗೂ ವೇದಿಕೆಯ ಮುಂಭಾಗದಲ್ಲಿ ಸಾರ್ವಜನಿಕರಿಗೆ ಕುಳಿತುಕೊಳ್ಳುವ ಆಸನ ಹಾಗೂ ಬೇಕಾಗುವ ಇತರೆ ಸಾಮಗ್ರಿಗಳನ್ನು 3 ದಿನಕ್ಕೆ ಬಾಡಿಗೆ ಆಧಾರದಲ್ಲಿ ವ್ಯವಸ್ಥೆ ಮಾಡಿ ಪುನಃ ತೆಗೆದುಕೊಂಡು ಹೋಗಲು ಈ ಕೆಳಗಿನ ಶರ್ತುಗಳಿಗೆ ಒಳಪಟ್ಟು ಟೆಂಡರ್ ಕರೆಯಲಾಗಿರುತ್ತದೆ. ಟೆಂಡರ ಸಲ್ಲಿಸುವ ಅಂತಿಮ ದಿನಾಂಕ:22-11-2017 ರಂದು 16-00 ಗಂಟೆಯೊಳಗೆ ದರವಾರವನ್ನು ಜಿಲ್ಲಾ ನಗರಾಭಿವೃದ್ಧಿ ಕೋಶ, ಉ.ಕ. ಕಾರವಾರ ಕಚೇರಿಯಲ್ಲಿ ಇಟ್ಟ ಟೆಂಡರ್ ಪೆಟ್ಟಿಗೆಯಲ್ಲಿ ದರವಾರವನ್ನು ಅಧಿಕೃತ ಟೆಂಡರ್ ನಮೂನೆಯಲ್ಲಿ ಸಲ್ಲಿಸಬಹುದಾಗಿದೆ. ಟೆಂಡರ್ ನಮೂನೆಗಳನ್ನು ಜಿಲ್ಲಾ ನಗರಾಭಿವೃದ್ಧಿ ಕೋಶದಿಂದ ಪಡೆದುಕೊಳ್ಳಬಹುದಾಗಿದೆ. ಅವಧಿ ಮೀರಿ ಬಂದ ಟೆಂಡರ್‌ಗಳನ್ನು ಸ್ವೀಕರಿಸಲಾಗುವುದಿಲ್ಲ. ಹೆಚ್ಚಿನ ಮಾಹಿತಿಗಾಗಿ ಸಹಾಯಕ ಕಾರ್ಯಪಾಲಕ ಅಭಿಯಂತರರು, ಜಿಲ್ಲಾ ನಗರಾಭಿವೃದ್ಧಿ ಕೋಶ, ಉ.ಕ. ಕಾರವಾರ ಇವರಿಗೆ ದೂರವಾಣಿ ಸಂಖ್ಯೆ 08382-221170 ಅಥವಾ ಮೊಬೈಲ್ ನಂ. 9448120430 ಅಥವಾ ಇ-ಮೇಲ್– itstaffdudckarwar@gmail.com ಮೂಲಕ ಸಂಪರ್ಕಿಸಬಹುದಾಗಿದೆ.

1. ಟೆಂಡರ್ ಸಲ್ಲಿಸುವ ಅಂತಿಮ ದಿನಾಂಕ: 22-11-2017 ರಂದು 16-00 ಗಂಟೆ
2. ಟೆಂಡರ್ ತೆರೆಯುವ ದಿನಾಂಕ: 23-11-2017 ರಂದು 17-00 ಗಂಟೆ
3. ಮುಂಗಡ ಠೇವಣಿ ರೂ. 50,000/- (ರಾಷ್ಟ್ರೀಕೃತ ಬ್ಯಾಂಕ್ ಡಿ.ಡಿ ಮೂಲಕ)

**ಶರ್ತುಗಳು :-**

1) ಸ್ವೀಕೃತವಾದ ದರವಾರುಗಳನ್ನು ಹಾಜರಿದ್ದ ಟೆಂಡರ್‌ದಾರರು ಅಥವಾ ಅವರ ಅಧಿಕೃತ ಪ್ರತಿನಿಧಿಗಳ ಎದುರಿನಲ್ಲಿ ದಿನಾಂಕ: 23-11-2017 ರಂದು 17-00 ಗಂಟೆಗೆ ಜಿಲ್ಲಾ ನಗರಾಭಿವೃದ್ಧಿ ಕೋಶ, ಉ.ಕ. ಕಾರವಾರದಲ್ಲಿ ತೆರೆಯಲಾಗುವುದು.

2) ಟೆಂಡರ್‌ದಾರರಿಗೆ ಆದೇಶ ನೀಡಿದ 8 ದಿನಗಳಲ್ಲಿ ಟೆಂಡರ್‌ನಲ್ಲಿ ಸೂಚಿಸಿದ ಎಲ್ಲಾ ಕಾಮಗಾರಿಗಳನ್ನು ನಿರ್ವಹಿಸಿಕೊಡತಕ್ಕದ್ದು.

3) ಟೆಂಡರ್‌ದಾರರು ಯಾವತ್ತೂ ವಿದ್ಯುತ್ ವ್ಯವಸ್ಥೆ ತಮ್ಮ ಸ್ವಂತ ಖರ್ಚಿನಿಂದ ಮಾಡಿಕೊಳ್ಳುವುದು ಹಾಗೂ ಅದಕ್ಕೆ ಸಂಬಂಧಿಸಿದ ಹೆಸ್ಕಾಂ ಶುಲ್ಕವನ್ನು ಅವರೇ ಪಾವತಿಸುವುದು.

4) ಟೆಂಡರ್‌ದಾರರು ತಮ್ಮ ಸ್ವಂತ ಖರ್ಚಿನಿಂದ ಸರಬರಾಜು ಮಾಡಿದ ಎಲ್ಲಾ ಸಾಮಗ್ರಿಗಳ ಭದ್ರತೆಯನ್ನು ಮಾಡಿಕೊಳ್ಳುವುದು.

5) ಟೆಂಡರ್‌ದಾರರು ಎಲ್ಲಾ ಸಾಮಗ್ರಿಗಳನ್ನು ಸುವ್ಯವಸ್ಥಿತ ಸ್ಥಿತಿಯಲ್ಲಿ ಅಳವಡಿಸಿದ ನಂತರ ಕರಾವಳಿ ಉತ್ಸವ-2017 ಮುಕ್ತಾಯಗೊಂಡ ನಂತರ ಪೂರ್ಣ ಪಾವತಿಸಲಾಗುವುದು.

6) ಟೆಂಡರ್ ನಮೂನೆಯಲ್ಲಿ ತೋರಿಸಿದ ಸಾಮಗ್ರಿಗಳನ್ನು ಸರಬರಾಜು ಮಾಡದೇ ಇದ್ದಲ್ಲಿ ಸದ್ರಿಯವರ ಬಿಲ್ಲಿನಿಂದ ಹಣವನ್ನು ಕಡಿತ ಮಾಡಲಾಗುವುದು.

7) ಟೆಂಡರ್‌ದಾರರು ಟೆಂಡರ್ ಸಮಿತಿಯಿಂದ ಅಥವಾ ಕರಾವಳಿ ಉತ್ಸವ ಸಮಿತಿ – 2017 ರಿಂದ ಅಧಿಕಾರ ಹೊಂದಿದವರು ತಿಳಿಸಿದಂತೆ ವೇದಿಕೆ ಮುಂಭಾಗದಲ್ಲಿ ಕಬ್ಬಿಣದ ಪೈಪ್ ಮತ್ತು ಜಾಳಿಗೆಯಿಂದ ಬ್ಯಾರಿಕೇಡ್ ವ್ಯವಸ್ಥೆ ಮಾಡಿಕೊಡುವುದು.

8) ಟೆಂಡರ್‌ದಾರರು ಟೆಂಡರ್ ಫಾರ್ಮನಲ್ಲಿ ಇಲ್ಲದ ಐಟಂಗಳು ಬೇಕಾದಲ್ಲಿ ಅವುಗಳನ್ನು ಸರಬರಾಜು ಮಾಡತಕ್ಕದ್ದು ಹಾಗೂ ಅದಕ್ಕೆ ಮಾರುಕಟ್ಟೆಯಲ್ಲಿ ಇರುವ ಬಾಡಿಗೆ ಆಧಾರದಲ್ಲಿ ಹೆಚ್ಚುವರಿ ಹಣವನ್ನು ಟೆಂಡರ್ ಸಮಿತಿ, ಕರಾವಳಿ ಉತ್ಸವ–2017 ಪರಿಶೀಲಿಸಿ ಪಾವತಿ ಮಾಡಲು ಶಿಫಾರಸ್ಸು ಮಾಡಲಾಗುವುದು.

9) ಈ ಟೆಂಡರ್ ಸಂಬಂಧ ಟೆಂಡರ್ ಸಮಿತಿ, ಕರಾವಳಿ ಉತ್ಸವ – 2017 ಉ.ಕ. ಕಾರವಾರ ಅಥವಾ ಜಿಲ್ಲಾಧಿಕಾರಿಗಳು ಕೈಗೊಳ್ಳುವ ಯಾವತ್ತೂ ನಿರ್ಣಯ ಅಂತಿಮವಾಗಿರುತ್ತದೆ.

10) ಈ ಹಿಂದೆ ದೊಡ್ಡಮಟ್ಟದ ಸಾಂಸ್ಕೃತಿಕ ಕಾರ್ಯಕ್ರಮಕ್ಕೆ ವೇದಿಕೆ ರೂಪಿಸಿದ ಬಗ್ಗೆ ದಾಖಲೆ ಪತ್ರಗಳನ್ನು ಟೆಂಡರ್ ಸಂಗಡ ನೀಡತಕ್ಕದ್ದು.

11) ಯಾವತ್ತೂ ಕೆಲಸವನ್ನು ವೇದಿಕೆ ಸಮಿತಿಯೊಂದಿಗೆ ಸಹಕರಿಸಿ ಅವರ ನಿರ್ದೇಶನವನ್ನು ಸಹ ಪಾಲಿಸತಕ್ಕದ್ದು.

12) ಟೆಂಡರ್‌ದಾರರು ಸಲ್ಲಿಸುವ ದರವಾರವು ಎಲ್ಲಾ ತೆರಿಗೆ ಮತ್ತು ಕರ ಸೇರಿಸಿ ನೀಡತಕ್ಕದ್ದು.

ಅಧ್ಯಕ್ಷರು ಟೆಂಡರ್ ಸಮಿತಿ /ಕರಾವಳಿ ಉತ್ಸವ – 2017 ಮತ್ತು
ಕಾರ್ಯಪಾಲಕ ಅಭಿಯಂತರರು, ಜಿಲ್ಲಾ ನಗರಾಭಿವೃದ್ಧಿ ಕೋಶ
ಉತ್ತರ ಕನ್ನಡ, ಕಾರವಾರ